ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಂಜೂರಾದ ಗ್ರಾಮ ಲೆಕ್ಕಿಗರ ಸಂಖ್ಯೆ

389 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಂಜೂರಾದ ಗ್ರಾಮ ಲೆಕ್ಕಿಗ ಹುದ್ದೆಗಳ ಸಂಖ್ಯೆ ಎಷ್ಟು?*

ಆ) *ಹಾಗಿದ್ದಲ್ಲಿ ಅವುಗಳಲ್ಲಿ ಭರ್ತಿ ಮಾಡಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?*

ಇ) *ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು.*

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) 166

ಆ) ಭರ್ತಿ ಮಾಡಿರುವ ಹುದ್ದೆಗಳು 108

ಖಾಲಿಯಿರುವ ಹುದ್ದೆಗಳು 58

ಇ) ಖಾಲಿಯಿರುವ ಗ್ರಾಮ ಲೆಕ್ಕಿಗ ಹುದ್ದೆಗಳನ್ನು ವಿವಿಧ ಇಲಾಖೆಗಳಲ್ಲಿ ಸಕ್ರಮಗೊಂಡು ಹೆಚ್ಚುವರಿಯಾದ ಅರ್ಹ ದಿನಗೂಲಿ ನೌಕರರನ್ನು ಆಯಾ ಇಲಾಖೆಗಳಿಂದ ವರ್ಗಾವಣೆ ಮಾಡಿಕೊಂಡು ಭರ್ತಿ ಮಾಡಲು ತೀವ್ರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ 1991-92ರಲ್ಲಿ ಗಂಧದ ಕಳ್ಳಸಾಗಣಿಕೆ ಮೇಲೆ ಹೂಡಿರುವ ಮೊಕದ್ದಮೆಗಳ ಸಂಖ್ಯೆ

390 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *1991-92ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಶ್ರೀಗಂಧದ ಕಳ್ಳ ಸಾಗಾಣಿಕೆದಾರರ ಮೇಲೆ ಹೂಡಿರುವ ಮೊಕದ್ದಮೆಗಳು ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)*

ಆ) *ಅವರುಗಳಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗಿದೆ?*

ಇ) *1991ರಿಂದ 92ರ ಸಾಲಿನಲ್ಲಿ ಕಳ್ಳ ಸಾಗಾಣಿಕೆದಾರರಿಂದ ಎಷ್ಟು ಟನ್ ಗಂಧವನ್ನು ವಶಪಡಿಕೊಳ್ಳಲಾಗಿದೆ ಹಾಗೂ ಅದರ ಮೌಲ್ಯವೆಷ್ಟು?*

ಶ್ರೀ ಈಟಿ ಶಂಭುನಾಥ (ಅರಣ್ಯ ರಾಜ್ಯ ಸಚಿವರು) :

ಅ) ಜನವರಿ 1992ರ ಅಂತ್ಯವರೆಗಿನ ವಿವರ ಈ ಕೆಳಗಿನಂತಿದೆ.

ತಾಲ್ಲೂಕು	ಹೂಡಿರುವ ಮೊಕದ್ದಮೆಗಳ ಸಂಖ್ಯೆ
1) ಚಿಕ್ಕಮಗಳೂರು	67
2) ಮೂಡಿಗೆರೆ	48
3) ಕಡೂರು	3
4) ಕೊಪ್ಪ	28
5) ಶೃಂಗೇರಿ	15
6) ನರಸಿಂಹರಾಜಪುರ	17

ಆ) ಎಲ್ಲಾ ಪ್ರಕರಣಗಳೂ ವಿಚಾರಣೆಯ ಹಂತದಲ್ಲಿವೆ.

ಇ) 1992ಜನವರಿ ಅಂತ್ಯದವರೆಗೆ 35.5 ಟನ್ ಶ್ರೀಗಂಧವನ್ನು ವಶಪಡಿಸಿಕೊಂಡಿದ್ದು ಇದರ ಅಂದಾಜು ಮೌಲ್ಯ ರೂ. 53.25 ಲಕ್ಷ ವಿರುತ್ತದೆ.

ಅತಿವೃಷ್ಟಿಯಿಂದ ಬಿದ್ದುಹೊದ ಮನೆಗಳ ಸಂಖ್ಯೆ ಹಾಗೂ ಅವುಗಳ ದುರಸ್ಥಿ

439 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 1991ನೇ ಆಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಆದ ಅತಿವೃಷ್ಟಿ ಮಳೆಯಿಂದ ಬಿದ್ದುಹೋದ ಮನೆಗಳ ಸಂಖ್ಯೆ ಎಷ್ಟು? (ಕೋಲಾರ ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಗಳು, ತುಮಕೂರು ಮೈಸೂರು ಗ್ರಾಮಾಂತರ ಜಿಲ್ಲೆಗಳ ವಿವರ ನೀಡುವುದು)

ಆ) ಆ ಮನೆಗಳನ್ನು ಆಶ್ರಯ ಯೋಜನೆಯಡಿಯಲ್ಲಿ ಕಟ್ಟಿಸಿಕೊಡಲು ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳುವರೇ

ಇ) ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) 1) ಬೆಂಗಳೂರು ನಗರ 65723

2) ತುಮಕೂರು 9395

3) ಮೈಸೂರು – 257

4) ಬೆಂಗಳೂರು (ಗ್ರಾಮಾಂತರ) 6486

5) ಕೋಲಾರ 17099

ಆ) ಹೌದು

ಇ) 60.00 ಕೋಟಿ ರೂಗಳು.

ನಾಗರ ಹೊಳೆ ಅಭಯಾರಣ್ಯದಲ್ಲಿ ಸತ್ತಿರುವ ಹುಲಿ ಮತ್ತು ಚಿರತೆಗಳ ಸಂಖ್ಯೆ

442 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ನಾಗರಹೊಳೆ ಅಭಯಾರಣ್ಯದಲ್ಲಿ ಸತ್ತಿರುವ ಹುಲಿ ಮತ್ತು ಚಿರತೆಗಳ ಸಂಖ್ಯೆ ಎಷ್ಟು?

2) ಇವುಗಳ ಸಾವಿಗೆ ಕಾರಣವೇನು?

ಶ್ರೀ ಈ.ಟಿ ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

1) ವರ್ಷ	ಹುಲಿಗಳು	ಚಿರತೆಗಳು
1989-90	3	–
1990-91	2	3
1991-92	3	1
	8	4

2) ಪರಸ್ಪರ ಕಾದಾಟ ಮುದಿತನ ಮತ್ತು ಕಾಯಿಲೆ ಹಾಗೂ ಕಳ್ಳಬೇಟೆ.